ಶ್ರೀ ಎ. ಎ. ದೇಸಾಯಿ — ಈ ಎರಡು ನಾಲೆಗಳ ಮೇಲೆ ಒಡ್ಡುದಾರಿಯನ್ನು ನಿರ್ಮಿಸುವ ಬಗ್ಗೆ ಪ್ಲಾನ ಅಂಡ್ ಎಸ್ಟಿಮೇಟ್ಸ್ ತಯಾರಾಗಿದೆಯೇ ?

† ಶ್ರೀ ಎಚ್. ಎಂ. ಚೆನ್ನಬಸಪ್ಪ.— ಈ ಬಗ್ಗೆ ಲೈನ್ ಎಸ್ಟಿಮೇಟ್ ತಯಾರಾಗಿದೆ ; ಮತ್ತು ಅಜೂರ್ ನಾಲೆಗೆ ಅಡ್ಡಲಾಗಿ ಸೇತುವೆ ನಿರ್ಮಾಣ ಮಾಡುವ ಬಗ್ಗೆ ೬ ಲಕ್ಷದ ೬೦ ಸಾವಿರ ರೂಪಾಯಿಗಳ ಎಸ್ಟಿಮೇಟ್ ತಯಾರಾಗಿದೆ, ಅಗ್ರಾಣಿ ನಾಲೆಗೆ ಅಡ್ಡಲಾಗಿ ಸೇತುವೆ ನಿರ್ಮಾಣ ಮಾಡುವ ಬಗ್ಗೆ ೮ ಲಕ್ಷ ರೂಪಾಯಿಗಳ ಅಂದಾಜು ತಯಾರಾಗಿದೆ.

MADAM SPEAKER.— Now Questions are over.

QUESTION FOR ANSWER ON THE DAY.
(but not taken up)

ರಂಗಾಪುರ ಕಾವಲಿನಲ್ಲಿ ಪಶುಸಂಗೋಪನಾ ಇಲಾಖೆಯವರ ವಶದಲ್ಲಿರುವ ಜಮೀನು

೬೯೭ ಶ್ರೀ ಎಂ. ನಂಜೇಗೌಡ (ಗಂಡಸಿ) — ವ್ಯವಸಾಯ ಹಾಗೂ ಪಶುಸಂಗೋಪನ ಮಂತ್ರಿಗಳು ಈ ವಿಷಯಗಳನ್ನು ದಯೆಯಿಟ್ಟು ತಿಳಿಸುವರೆ : —

(ಅ) ಅರಸೀಕೆರೆ ತಾಲ್ಲೂಕಿನ ರಂಗಾಪುರ ಕಾವಲಿನಲ್ಲಿ ಪಶುಸಂಗೋಪನಾ ಇಲಾಖೆಯ ವಶದಲ್ಲಿರುವ ಜಮೀನೆಷ್ಟು :

(ಆ) ೧೯೫೦ನೇ ಇಸವಿಯಿಂದೀಚೆಗೆ ಈ ಕಾವಲಿನಲ್ಲಿ ಕಂದಾಯ ಇಲಾಖೆಯವರಿಗೆ ವಹಿಸಿಕೊಟ್ಟ ಜಮೀನೆಷ್ಟು (ಯಾವ ಸಾಲಿನಲ್ಲಿ ಎಷ್ಟೆಷ್ಟು ಎಕರೆ ಬಿಡಲಾಯ್ತು ಎಂಬುದಕ್ಕೆ ವಿವರ ಕೊಡಿ) :

(ಇ) ಕಂದಾಯ ಇಲಾಖೆಗೆ ವಹಿಸಿಕೊಡುವ ಸಂಧರ್ಭದಲ್ಲಿ ಅದಾಜು ನಕ್ಷೆ ತಯಾರಿಸಿ ಕೊಟ್ಟಿರುವುದು ನಿಜವೇ ?

ಶ್ರೀ ಎನ್. ಚಿಕ್ಕೇಗೌಡ (ವ್ಯವಸಾಯ ಹಾಗೂ ಪಶುಸಂಗೋಪನ ಮಂತ್ರಿಗಳು). —

(ಅ) ೧೫೨೦ ಎಕರೆ

(ಆ) ೨೪೬-೦೪ ಎಕರೆಗಳ ಪ್ರದೇಶವನ್ನು ೧೯೫೭ನೇ ಇಸವಿಯಲ್ಲಿ ಕಂದಾಯ ಇಲಾಖೆಗೆ ವಹಿಸಿಕೊಡಲಾಯಿತು.

(ಇ) ಹೌದು.

Occupancy Rights of Tenants in Gulbarga District

711 SRI J. P. SARWESH (Sedam).— Will the Minister for revenue be pleased to state :—

(*a*) the number of tenants who have been granted occupancy rights by the land tribunals in Gulbarga District ;

(*b*) the number of tenants who have been evicted and not in physical possession of the tenanted lands, which the land tribunals have decided in favour of tenants in Gulbarga District ;

(*c*) after granting occupancy rights by the land tribunals in Gulbarga District, how many tenants are in physical possession of the tenanted land (the talukwise figures may be given) ?